ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಹಕ್ಕಾನನೆ—ಮಂಗಳೂರು ರೈಲ್ವೆ ಆಗಿ ಕಡೂರು—ಚಿಕ್ಕಮಗಳೂರು—ಮೂಡಿಗೆರೆ—ನಕಲೇಶಪುರ ಮಾರ್ಗವನ್ನು ರಚಿಸುವ ಬಗ್ಗೆ ತಮ್ಮ ಅಭಿಪ್ರಾಯವೇನು ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಅಭಿಪ್ರಾಯದಿಂದ ಏನಾಗುತ್ತದೆ ರೈಲ್ವೆ ಮಿನಿಸ್ಟ್ರಿಯವರು ಆದನ್ನು ವಿಚಾರ ಮಾಡಬೇಕು. ನಾನು ಅಭಿಪ್ರಾಯಪಟ್ಟರೂ ಏನೂ ಸಾಧ್ಯವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಹೊಸ ಮಾರ್ಗಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿರುವುದರ ಜೊತೆಗೆ ಇರತಕ್ಕ ರೈಲ್ವೆ ಮಾರ್ಗಗಳನ್ನು ಕೀಳದ ಹಾಗೆ ಮಾಡುತ್ತೀರಾ ? ಚಿಕ್ಕಜಾಜೂರು ಚಿತ್ರದುರ್ಗ ಮಾರ್ಗವನ್ನು ಕೀಳಬೇಕೆಂದು ಕೇಂದ್ರ ಸರ್ಕಾದವರು ವಿಚಾರ ಮಾಡುತ್ತಿರುವುದಾಗಿ ಗೊತ್ತಾಗಿದೆ. ಅದನ್ನು ಕೀಳದಂತೆ ತಡೆಗಟ್ಟುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ರೀತಿಯಾಗಿ ಕೆಲವು ಮಾರ್ಗಗಳನ್ನು ಕೀಳಬೇಕು ಎನ್ನುವಂಥಾದ್ದರ ವಿಚಾರವಾಗಿ ಆಗಾಗ್ಗೆ ವರದಿಗಳು ಬರುತ್ತಿರುತ್ತವೆ ಮತ್ತು ಕೇಳುತ್ತಿರುತ್ತಾರೆ. ಈಗ ಹೇಳಿದ ಹಾಗೆ ಸಾಗರ—ತಾಳಗುಪ್ಪ, ಮೈಸೂರು—ಚಾಮರಾಜನಗರ, ಬಂಗಾರಪೇಟೆ—ಕೋಲಾರ—ಬೆಂಗಳೂರು, ಈ ಮಾರ್ಗಗಳೆಲ್ಲ ಅನ್ ರೆಮ್ಯುನರೇಟಿವ್ ಆಗಿವೆ, ರೈಲ್ವೆ ಇಲಾಖೆಗೆ ಅದರಿಂದ ಎಷ್ಟೋ ಹಾನಿಯಾಗುತ್ತದೆ, ಪ್ರತಿ ವರ್ಷವೂ ಲುಕ್ಸಾನಾಗುತ್ತದೆ ಎಂದು ಹೇಳುತ್ತಿದ್ದಾರೆ. ತಾವು ಇಲ್ಲಿಯವರೆಗೂ ಅವರು ಕೀಳದಂತೆ ನೋಡಿಕೊಂಡಿದ್ದೇವೆ, ಆ ಕೆಲಸ ಆಗದಂತೆ ತಡೆಹಿಡಿದಿದ್ದೇವೆ. ಆ ರೀತಿ ಆಗದಂತೆ ಸಾಧ್ಯವಾದಮಟ್ಟಿಗೂ ನೋಡಿಕೊಳ್ಳುತ್ತೇವೆ.

Vajjanakurke Tank in Koratagere Taluk

93. Sri GANGABOVI (Gulur).—

Will the Minister for Public Works be pleased to state :—

(*a*) whether it is a fact that the water was impounded in 1960 and lands under submersion to date under Vajjanakurke Tank in Koratagere Taluk, Tumkur District ;

(*b*) whether it is a fact that acquisition of land was not at all finalised even after impounding water since 1960 ;

(*c*) whether it is a fact that the land owners are still paying Kandayam for these lands under submersion since 1960 ;

(*d*) whether the Government would pay interest since 1960 on the amount of award ?

(*e*) if not whether Government would fix the responsibility on the defaulting officers for having delayed the matter ;

(*f*) whether Government would expedite the acquisition proceedings without further delay ?

A.—Sri ALUR HANUMANTHAPPA (Deputy Minister for Minor Irrigation).—

(*a*) No impounding was done in 1960. But the water was impounded during 1963.

(*b*) Does not arise in view of reply to clause (*a*).

(*c*) Yes.

(*d*) No.

(*e*) No.

(*f*) Yes.

ಶ್ರೀ ಗೊಂಗಾಜೋವಿ.—ಮುಳುಗಡೆಯಾಗಿರುವ ಜಮೀನುಳ್ಳವರಿಗೆ ಇದುವರೆಗೂ ಪರಿಹಾರ ಕೊಡದಿರುವುದು ನಿಜವೇ ?

† ಶ್ರೀ ಆಲೂರು ಹನುಮಂತಪ್ಪ.—ಹೌದು ; ಬೇಗನೆ ಕೊಡಬೇಕೆಂದು ಈಗಾಗಲೇ ಸಂಬಂಧಪಟ್ಟವರಿಗೆ ಸೂಚನೆ ಕೊಡಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—1963ರಲ್ಲಿ ನೀರು ನಿಲ್ಲಿಸಲಾಗಿದೆ. ಇಲ್ಲಿಗೆ 4 ವರ್ಷಗಳಾದರೂ ಕೂಡ ಪರಿಹಾರ ಕೊಡದೆ ತೊಂದರೆ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ತಕರಾರಿರ್ಲ್ಲದಿರುವ ಕಡೆ ಜಾಗ್ರತೆ ಕೊಡುತ್ತಾರೆ. ಸ್ವಲ್ಪ ಮಟ್ಟಿಗೆ ಇಲ್ಲಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ನಿಧಾನವಾಗಿದೆ. ಆದಷ್ಟು ಬೇಗ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಬೇಗ ಎಂದರೆ ಸುಮಾರು ಎಷ್ಟು ಕಾಲವಾಗಬಹುದು ?

ಶ್ರೀ ಆಲೂರು ಹನುಮಂತಪ್ಪ.—ಅವಾರ್ಡ್ ಪಾಸ್ ಮಾಡಿದ ತಕ್ಷಣ ಕೊಡುತ್ತೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ಕೆರೆಗೆ ನೀರು ಬಂದು ಮಾಲೀಕರಿಗೆ ಹಾನಿಯಾಗಿದೆ ಪರಿಹಾರ ಜಾಗ್ರತೆ ಕೊಡದಿರುವುದರಿಂದ ಮುಳುಗಡೆಯಾದವರಿಗೆ ತೊಂದರೆಯಾಗಿದೆ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಸಾಮಾನ್ಯವಾಗಿ ಕೆರೆಯ ನೀರನ್ನು ವ್ಯರ್ಥ ಮಾಡಲು ಗ್ರಾಮಸ್ಥರು ಅವಕಾಶಕೊಡುವುದಿಲ್ಲ. ಮುಂದೆ ಪಿ.ಡಬ್ಲ್ಯು.ಡಿ.ಗೆ ಬಂದನಂತರ ಕ್ರಮ ತೆಗೆದು ಕೊಳ್ಳುತ್ತಾರೆ.

Procurement of Foodgrains under Levy Orders

94. Sri B. BHASKAR SHETTY (Kaup).—

Will the Minister for Food and Civil Supplies be pleased to state :—

(*a*) what is the demand made from the date of commencing procurement of foodgrains under Levy Orders (District-war and Year-war) ;

(*b*) out of this the quantity of foodgrains collected (District-war and Year-war) ;

(*c*) the quantity of foodgrains left for local utilisation out of the foodgrains so collected (District-war and Year-war) ?

A.— Sri B. D. JATTI (Minister for Food and Civil Supplies).—

(*a*) *Vide* statement (A) placed on the Table of the House.**

(*b*) *Vide* statement (B) placed on the Table of the House.**

(*c*) *Vide* statement (C) placed on the Table of the House.**

** Copies placed in the Mysore Legislature Library. *Vide* Number 8, dated 15th December 1967.